## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ.1139/2014

| | | | |
|---|---|---|---|
| **ಚಾಸಾ ಃ** | **15** | **ಪ್ರಾಸಾಃ-** | **2** |

ಹೆಸರು ಎ ಪಿ ಕುಮಾರ್

ತಂದೆಯ ಹೆಸರು ಪುಟ್ಟಸ್ವಾಮಚಾರ್

ವಯಸ್ಸು **50**

ಉದ್ಯೋಗ ಪಿಐ, ನೆಲಮಂಗಲ ಟ್ರಾಫಿಕ್,

ವಿಳಾಸ ಬೆಂಗಳೂರು

- - - - - - - - - - - - - - - - - - - - - - - - - - - - - - -

**ದಿಃ12.02.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು **10.09.2012** ರಿಂದ **23.06.2014** ರ ವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.**12.01.2013** ರಂದು ಚಾಸಾ-**14** ರವರಿಂದ ಕೇಸಿನ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ.**12.01.2013** ರಂದು ಬೆಳಿಗ್ಗೆ **8:00** ಗಂಟೆ ಸುಮಾರಿಗೆ ಸಾಯಿರಾಂ ಆಸ್ಪತ್ರೆ, ಬೆಂಗಳೂರು ಇವರಿಂದ ಫೋನ್ ಕರೆ ಮೇರೆಗೆ ಠಾಣಾ ಸಿಬ್ಬಂದಿ ಪಿಸಿ-**16** ನಾಗಪ್ಪ ಸಣ್ಣಮೆಟಿ ಇವರನ್ನು ಸಾಯಿರಾಂ ಆಸ್ಪತ್ರೆಗೆ ಕಳುಹಿಸಿ ಪ್ರಕರಣದ ಗಾಯಾಳು ಕುಮಾರಿ ಸರಣ್ಯ ಇವರ ಬಾಬ್ತು ಮರಣ ಮೇಮೊವನ್ನು ಪಡೆದು ಬೆಳಿಗ್ಗೆ **9:00** ಗಂಟೆಗೆ ಠಾಣೆಗೆ ಹಾಜರುಪಡಿಸಿದ್ದು, ಸದರಿ ಮೇಮೋವನ್ನು ಸ್ವೀಕರಿಸಿ ಈಗಾಗಲೇ ದಾಖಲಾಗಿರುವ ಠಾಣಾ ಗುನ್ನ ನಂ.**18/2013** ರಲ್ಲಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ

ಮರಣದ ಕುರಿತು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಮೇಮೊವನ್ನು ನಿವೇದಿಸಿಕೊಂಡಿರುತ್ತೇನೆ.

ನಂತರ ಕಡತವನ್ನು ಚಾಸಾ-16 ರವರಿಗೆ ಮುಂದಿನ ತನಿಖೆಗಾಗಿ ನೀಡಿರುತ್ತೇನೆ. ಸದರಿ ಮೇಮೊವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>**

**ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಆರೋಪಿ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಲಾಯಿತು.**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**